ದಿನಾಂಕಃ 21.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು 2 ನೇ ಪ್ರತಿವಾದಿ ಪರ ಶ್ರೀ. ವಿ.ಆರ್.ಎಸ್. ವಕೀಲರಿಂದ

ಜಮೀನಿನಲ್ಲಿ ಭಾಗ ಬೇಕು ಎಂದು ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವೆಯಲ್ಲಿ ಮತ್ತು ಸಾಕ್ಷಿ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. 1 ನೇ ಪ್ರತಿವಾದಿ ನನ್ನ ತಂದೆ ಅಣ್ಣೇಗೌಡ ವ್ಯವಸಾಯ ಮಾಡಿಕೊಂಡಿರುತ್ತಾರೆ. ನಾವು ಚಿಕ್ಕವರಿದ್ದಾಗ ನಮ್ಮ ತಂದೆ ಕೂಲಿ ಕೆಲಸಕ್ಕಾಗಿ ಕೊಡಗಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಅಲ್ಲಿ ನಮ್ಮ ತಂದೆ ತಾಯಿ ಹಾಗೂ 2 ನೇ ಪ್ರತಿವಾದಿ ಕೂಲಿ ಕೆಲಸ ಮಾಡಿ ನಮ್ಮನ್ನು ಸಾಕುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ತಾಯಿ ಮಾತ್ರ ಕೂಲಿ ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ನಮ್ಮ ಕುಟುಂಬದಲ್ಲಿ ಹಿರಿಯ ಮಗ ಎಂದರೆ ಸರಿ. ನನಗೂ ಮತ್ತು 2 ನೇ ಪ್ರತಿವಾದಿಗೆ 3 ವರ್ಷ ವಯಸ್ಸಿನ ಅಂತರ ಇದೆ. ನನಗೆ ಈಗ 44 ವರ್ಷ ವಯಸ್ಸು. 2 ನೇ ಪ್ರತಿವಾದಿಗೆ ಈಗ 47 ವರ್ಷ ವಯಸ್ಸು. ನನ್ನ ತಂದೆ ತಾಯಿ ಕೊಡಗಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ನನ್ನನ್ನು ಮತ್ತು 2 ನೇ ಪ್ರತಿವಾದಿಯನ್ನು ಸಾಕಿದ್ದರು ಎಂದರೆ ಸರಿ. ಕೊಡಗಿನಲ್ಲಿ ಕೂಲಿ ಕಡಿಮೆ ಆಯಿತು ಎಂದು 2 ನೇ ಪ್ರತಿವಾದಿ ಬಾಂಬೆಗೆ ದುಡಿಯಲು ಹೋದರು ಎಂದರೆ ಸಾಕ್ಷಿ ಅವರು ಹೋಗಿಲ್ಲ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಮನೆಯಲ್ಲಿ ಹಿರಿಯ ಮಗನಾಗಿದ್ದು ಅವನೇ ಬಾಂಬೆಗೆ ದುಡಿಯಲ್ಲು ಹೋಗಿದ್ದ ಎಂದರೆ ಸಾಕ್ಷಿ ಇಲ್ಲ ಅವನು ತಂದೆಯೊಂದಿಗೆ ವ್ಯವಸಾಯ ಮಾಡಿಕೊಂಡಿದ್ದು, ನಾನೇ ಬಾಂಬೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ.

ನಾನು ಬಾಂಬೆಯಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದೆ. ನಾನು ಬಾಂಬೆಯಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಾನು ಹಾಗೂ 4 ಮತ್ತು 5 ನೇ ಪ್ರತಿವಾದಿಯರು ಮನೆಯಲ್ಲಿಯೇ ಇದ್ದೇವು, 2 ನೇ ಪ್ರತಿವಾದಿ ನಮ್ಮನ್ನು ಸಾಕುವ ಸಲುವಾಗಿ ಬಾಂಬೆಗೆ ದುಡಿಯಲು ಹೋಗಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಯಾವಾಗ ಜಮೀನನ್ನು ಖರೀದಿ ಮಾಡಿದರು ಎಂದರೆ ಸಾಕ್ಷಿ ಅವನೊಬ್ಬನೇ ಅಲ್ಲ ಎಲ್ಲರೂ ಒಟ್ಟಿಗೆ ಸೇರಿ 2012 ರಲ್ಲಿ 4 ಎಕರೆ ಜಮೀನು ಹಾಗೂ 2013 ನೇ ಇಸವಿಯಲ್ಲಿ 3 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುವುದಾಗಿ ಉತ್ತರಿಸುತ್ತಾರೆ.

ನಾನು ಬಾಂಬೆಯಲ್ಲಿ ದುಡಿಯಲು ಹೋಗಿದ್ದೆ ಅಲ್ಲಿಂದ ಹಣ ತರುತ್ತಿದ್ದೆ ಎನ್ನುವ ವಿಷಯವನ್ನು ವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪತ್ರದಲ್ಲಾಗಲೀ ಬರೆಸಿರುವುದಿಲ್ಲ. ಬಾಂಬೆಯಲ್ಲಿ ಗಳಿಸಿದ ಹಣದಿಂದ ಎಲ್ಲರೂ ಸೇರಿ ಜಮೀನು ಖರೀದಿ ಮಾಡಿರುತ್ತೇವೆ ಎಂದು ದಾವೆಯಲ್ಲಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಒಂದುವೇಳೆ ನಾನು ಬಾಂಬೆಯಲ್ಲಿ ದುಡಿದ ಹಣದಿಂದ ಎಲ್ಲರೂ ಸೇರಿ ಜಮೀನು ಖರೀದಿಸಿದ್ದರೆ ಅದನ್ನು ದಾವೆಯಲ್ಲಿ ಹೇಳುತ್ತಿದ್ದೆ ಆದರೆ ಯಾವುದೇ ವಿಷಯವನ್ನು ಹೇಳದೆ ಇರುವುದರಿಂದ, ಆಸ್ತಿಗಳನ್ನು ನಾನು ದುಡಿದ ಹಣದಿಂದ ಗಳಿಸಿರುವುದಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರೆ ಸರಿಯಲ್ಲ.

ನಾನು, 1 ಹಾಗೂ 4 ಮತ್ತು 5 ನೇ ಪ್ರತಿವಾದಿಯರು ಒಟ್ಟಿಗೆ ಚೆನ್ನಾಗಿ ಇದ್ದೇವೆ ಎಂದರೆ ಸರಿ. 2 ನೇ ಪ್ರತಿವಾದಿಯು ಖರೀದಿಸಿದ ಕ್ರಮ ಸಂಖ್ಯೆ 6 ನೇ ಆಸ್ತಿಯನ್ನುಹೇಗಾದರು ಮಾಡಿ ಪಡೆಯಬೇಕು ಎಂಬ ಉದ್ದೇಶದಿಂದ ನಾನು ಹಾಗೂ ಉಳಿದ ಪ್ರತಿವಾದಿಯರು ಸೇರಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸುಮಾರು 30 ವರ್ಷಗಳ ಬಾಂಬೆಯಲ್ಲಿ ಒಂದು ಹೋಟೆಲ್‌ನಲ್ಲಿ ದುಡಿದು ಗಳಿಸಿದ ಹಣದಿಂದ ಕ್ರಮ ಸಂಖ್ಯೆ 6 ನೇ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಲಕ್ಷ್ಮೀಪುರ ಗ್ರಾಮದಲ್ಲಿ ಒಂದು ಜನತಾ ಮನೆ ಇದೆ ಎಂದರೆ ಸರಿ. ಅದೇ ರೀತಿ ನನ್ನ ತಂದೆ ತಾಯಿ ಹೆಸರಿನಲ್ಲಿ ಲಕ್ಷ್ಮೀಪುರದಲ್ಲಿ ಒಂದು ವಾಸದ ಮನೆ ಇದೆ ಎಂದರೆ ಸರಿ. ಅದೇ ರೀತಿ 4 ಮತ್ತು 5 ನೇ ಪ್ರತಿವಾದಿಯರು ಸಹಾ ಲಕ್ಷ್ಮೀಪುರದಲ್ಲಿ ಒಂದು ವಾಸದ ಮನೆ ಇದೆ ಎಂದರೆ ಸಾಕ್ಷಿ ಇಲ್ಲ ಅವರು ತೋಟದಲ್ಲಿ ಇರುವ ಷೆಡ್‌ನ ಮನೆಯಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿರುವ ಜನತಾ ಮನೆ, ನನ್ನ ತಂದೆ ತಾಯಿ ವಾಸವಾಗಿರುವ ಮನೆ ಹಾಗೂ 4 ಮತ್ತು 5 ನೇ ಪ್ರತಿವಾದಿಯರು ವಾಸ ಇರುವ ಷೆಡ್‌ನ ಮನೆಯನ್ನು ಈ ದಾವೆಯನ್ನು ಸೇರಿಸಿಲ್ಲ ಎಂದರೆ ಸರಿ. ಈ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಕ್ರಮ ಸಂಖ್ಯೆ 6 ನೇ ಆಸ್ತಿಯಲ್ಲಿ 2 ನೇ ಪ್ರತಿವಾದಿ ಅನುಭೋಗದಲ್ಲಿ ಇದ್ದಾನೆ ಎಂದರೆ ಸಾಕ್ಷಿ ಎಲ್ಲರೂ ಅನುಭೋಗದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಮಾತ್ರ ಕ್ರಮ ಸಂಖ್ಯೆ 6 ನೇ ಆಸ್ತಿಯಲ್ಲಿ ಅನುಭೋಗದಲ್ಲಿ ಇದ್ದರು ಸಹಾ ಎಲ್ಲರೂ ಇದ್ದೇವೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ : 6 ನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳಲ್ಲಿ 6 ನೇ ಪ್ರತಿವಾದಿಗೆ ಯಾವುದೇ ಪಾಲು ಕೊಟ್ಟಿಲ್ಲ ಮತ್ತು ಅವುಗಳ ಅನುಭೋಗದಲ್ಲಿಯೂ ಸಹಾ 2 ನೇ ಪ್ರತಿವಾದಿ ಇರುವುದಿಲ್ಲ ಎಂದರೆ ಸರಿಯಲ್ಲ.

2012 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತುಗಳ ಪೈಕಿ 4 ಎಕರೆ ಜಮೀನನ್ನು ಸುಬ್ಬಯ್ಯ ರವರಿಂದ ಖರೀದಿ ಮಾಡಿರುತ್ತಾರೆ. 2013 ರಲ್ಲಿ 2 ನೇ ಪ್ರತಿವಾದಿ ರಾಮಯ್ಯ ರವರ ಕಡೆಯಿಂದ 3 ಎಕರೆ 22 ಗುಂಟೆ ಜಮೀನನ್ನು ಕ್ರಯ ಮಾಡಿರುತ್ತಾರೆ. ನಿಮ್ಮ ಹೆಸರಿನಲ್ಲಿ ಕ್ರಯಪತ್ರಗಳನ್ನು ಮಾಡಿಸಲು ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ತಂದೆ ಹಾಗೂ 2 ನೇ ಪ್ರತಿವಾದಿ ಮನೆಯಲ್ಲಿ ಹಿರಿಯ ಮಗ ಆಗಿದ್ದರಿಂದ ಅವರುಗಳ ಹೆಸರಿನಲ್ಲಿ ಕ್ರಯಪತ್ರಗಳನ್ನು ಮಾಡಿಸಲಾಯಿತು ಎಂದು ನುಡಿಯುತ್ತಾರೆ. ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಂದೆ ಕ್ರಮ ಸಂಖ್ಯೆ 6 ನೇ ಆಸ್ತಿಯನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳ ಮೇಲೆ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್ , ತೆರಣ್ಯ ಶಾಖೆಯಲ್ಲಿ ಸಾಲ ಪಡೆದಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲರೂ ಸೇರಿಯೇ ಸಾಲ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಕ್ರಮ ಸಂಖ್ಯೆ 1 ರಿಂದ 5 ನೇ ಆಸ್ತಿಗಳಲ್ಲಿ ನನಗೂ ಸಹಾ ಪಾಲು ಇದೆ ಆದ್ದರಿಂದ ಅವುಗಳ ಮೇಲೆ ಸಾಲ ಕೊಡಬೇಡಿ ಎಂದು 2 ನೇ ಪ್ರತಿವಾದಿ ಬ್ಯಾಂಕಿನವರಿಗೆ ವಕೀಲರ ಮೂಲಕ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೋಟಿಸ್ ಕೊಟ್ಟ ವಿಷಯವನ್ನು ಬ್ಯಾಂಕ್ ಮ್ಯಾನೇಜರ್ ನನಗೂ ಮತ್ತು ನನ್ನ ತಂದೆಗೂ ತಿಳಿಸಿದರು ಸಹಾ ನಾವು ಬ್ಯಾಂಕ್ ಮ್ಯಾನೇಜರ್ ರವರೊಂದಿಗೆ ಷರೀಕ್ಕಾಗಿ ಆಸ್ತಿಗಳ ಮೇಲೆ ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸಾಲ ಪಡೆಯುವ ಸಲುವಾಗಿ ಬ್ಯಾಂಕಿನಲ್ಲಿ ನಾನು ಮತ್ತು ನನ್ನ ತಂದೆ ದಾಖಲಾತಿಗಳ ಮೇಲೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿ ನಾನು ಸಾಲ ಪಡೆದಿಲ್ಲ ಮತ್ತು ನಾನು ಯಾವುದೇ ಸಹಿಯನ್ನು ಸಹಾ ಮಾಡಿಲ್ಲ ಆದರೆ ನನ್ನ ತಂದೆ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಪಡೆದ ಸಾಲವನ್ನು ನಾನು ಮತ್ತು 4 ಮತ್ತು 5 ನೇ ಪ್ರತಿವಾದಿಯರು ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡುವ ಸಮಯಕ್ಕೆ 2 ನೇ ಪ್ರತಿವಾದಿ ಬಾಂಬೆಯಲ್ಲಿ ಕೆಲಸಕ್ಕೆ ಇದ್ದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರ ಹೆಸರುಗಳಲ್ಲಿ ಆದ ಕ್ರಯಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು, ಹಾಗೂ ಪ್ರತಿವಾದಿಯರೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದಾಗ ಒಟ್ಟು ಕುಟುಂಬದ ಆದಾಯದಿಂದ ದಾವಾ ಕ್ರಮ ಸಂಖ್ಯೆ 1 ನೇ ಆಸ್ತಿಯನ್ನು 1 ನೇ ಪ್ರತಿವಾದಿ ಹೆಸರಿಗೆ ಖರೀದಿ ಮಾಡಿರುತ್ತೇವೆ ಎಂದರೆ ಸಾಕ್ಷಿ ಕ್ರಮ ಸಂಖ್ಯೆ 1 ಮತ್ತು 6 ನೇ ಆಸ್ತಿಯನ್ನು ಸಹಾ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವುದಾಗಿ ಉತ್ತರಿಸುತ್ತಾರೆ. ಕ್ರಮ ಸಂಖ್ಯೆ 6 ನೇ ಆಸ್ತಿಯನ್ನು 2 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿದ್ದು, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 6 ನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳಲ್ಲಿ 2 ನೇ ಪ್ರತಿವಾದಿಗೆ ಸಮಾನಾದ ಹಿಸ್ಸೆ ಇದೆ ಎಂದರೆ ಸಾಕ್ಷಿ ಎಲ್ಲವೂ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಎಲ್ಲದರಲ್ಲಿಯೂ ಎಲ್ಲರಿಗೂ ಹಿಸ್ಸೆ ಇದೆ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದವರಿಗೆ ಕ್ರಮ ಸಂಖ್ಯೆ 6 ನೇ ಆಸ್ತಿಯಲ್ಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ಕ್ರಮ ಸಂಖ್ಯೆ 6 ನೇ ಆಸ್ತಿಗೆ ಕಂದಾಯವನ್ನು ಕಟ್ಟುತಾ ಅವನೇ ಸ್ವಾಧೀನದಲ್ಲಿ ಇದ್ದಾನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಕೂಗಿ ಕರೆಸಲಾಯಿತು. ಅವರ ಗೈರು ಹಾಜರಿಯ ಮೇರೆಗೆ 3 ನೇ ಪ್ರತಿವಾದಿ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.